# ನೋಡು ನೋಡು ನೋಡು ಕಂಡ್ಯ ಹೀಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 361.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ಕಾಂಭೋಜ ತಾಳ: ಆದಿ

ನೋಡು ನೋಡು ನೋಡು ಕಂಡ್ಯ ಹೀಗೆ ಮಾಡುತಾನೆ
ಗಾಡಿಗಾರ ನಿನ್ನ ಮಗ ಕೃಷ್ಣರಾಯ ಕಾಣೆ || ಪ ||

ಸೆರಗ ಪಿಡಿದು ಬಂದು ನಮ್ಮ ಸ್ತನವ ಪಿಡಿವುತಾನೆ
ಮರೆಗೆ ನಿಂತು ಕರದಿ ಸನ್ನೆ ತಿರುಗಿ ಮಾಡುತಾನೆ
ಎರಳೆಯಂತೆ ಎರಗಿ ಬಂದು ಮೇಲೆ ಬೀಳುತಾನೆ, ಈ
ತರಳಗೆ ಬುದ್ಧಿಯ ಪೇಳಿ ನಿಲ್ಲಿಸುವರ ಕಾಣೆ || 1 ||

ಕಂಡ ಕಂಡ ಬಳಿಯ ನಿಂತು ಕಣ್ಣ ಮುಚ್ಚುತಾನೆ
ಗಂಡರಾಳಿದಂದದಲಿ ಆಳೇನೆನ್ನುತಾನೆ
ಪುಂಡತನ ಬೇಡವೆಂದರೆ ಹಟದಿ ಬರುತಾನೆ, ಈ
ಲಂಡಗೆ ಬುದ್ಧಿಯ ಪೇಳಿ ನಿಲ್ಲಿಸುವರ ಕಾಣೆ || 2 ||

ಗೋವರ್ಧನಗಿರಿಯನೆತ್ತಿ ಬಂದೆನೆನ್ನುತಾನೆ
ಆವು ತುರು ಕರುಗಳನೆಲ್ಲ ತಂದೆನೆನ್ನುತಾನೆ
ಭಾವೆಯರ ಕಾಣುತಲೆ ಮೀರಿ ಬರುತಾನೆ
ನಾವು ಪೇಳಿದರು ಮಾತ ಕೇಳಲೊಲ್ಲ ಜಾಣೆ || 3 ||

ಹಾಲು ಮೊಸರು ಬೆಣ್ಣೆಗಳ ಹಾಳು ಮಾಡುತಾನೆ
ಕೋಲ ಕೊಂಡುಬಂದರೆ ಬಿಗಿದಪ್ಪಿಕೊಳ್ಳುತಾನೆ
ನೀಲ ಮೇಘ ಶ್ಯಾಮನೆಂದರೆ ಅಹುದು ಎನ್ನುತಾನೆ, ಈ
ಲೀಲೆಗಳೆಲ್ಲ ನಮಗೆ ತಾಳದಿನ್ನು ಕಾಣೆ || 4 ||

ನಾರಿಯರ ಬೆನ್ನಹತ್ತಿ ಮೇಲೆ ಬರುತಾನೆ
ಯಾರು ನೀನೆಂದರೆ ರುಕ್ಮಿಣಿಯರಸನೆನ್ನುತಾನೆ
ಕ್ಷೀರಸಾಗರವಾಸ ಎಂದರೆ ಅಹುದು ಎನ್ನುತಾನೆ
ವಾರಿಜಾಕ್ಷ ಪುರಂದರ ವಿಠಲ ತಾ ಕಾಣೆ || 5 ||

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, maga, putra, buddi, kannu, pati, parvata, govu, gopi, halu, benne, hennu, Rukmini, Samudra,
**Pravachana:** NA
**Explanation:** NA